(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು:– ಈಗ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿದ್ದೇನೆ.

(ಸದನದ ಕಲಾಪವನ್ನು 11 ಗಂಟೆ 48 ನಿಮಿಷಕ್ಕೆ ಮುಂದೂಡಿ ಪುನಃ 10 ನಿಮಿಷಗಳ ಬಳಿಕ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

(ಸದನವು ಅಪರಾಹ್ನ 12 ಗಂಟೆ 24 ನಿಮಿಷಕ್ಕೆ ಪುನಃ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ನಿಂತು ಘೋಷಣೆಗಳನ್ನು ಕೂಗುತ್ತಿದ್ದರು)

3. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು:– ಶ್ರೀ ಹೆಚ್.ಡಿ. ರೇವಣ್ಣನವರೆ, ನಿಮ್ಮ ಪ್ರಶ್ನೆಯನ್ನು ಕೇಳಿ.

(ಗೊಂದಲ)

ಶ್ರೀ ಕೆ. ಷಡಕ್ಷರಿ:– ರೈತ ವಿರೋಧಿ ಬಿಜೆಪಿಯವರಿಗೆ ಧಿಕ್ಕಾರ.

(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಸದಸ್ಯರು ನಿಂತು ಬಿಜೆಪಿಯವರ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಪ್ರಶ್ನೆ ಸಂಖ್ಯೆ: 01 (158)

ಶ್ರೀ ಹೆಚ್.ಡಿ. ರೇವಣ್ಣ:– ಸನ್ಮಾನ್ಯ ಸಭಾಧ್ಯಕ್ಷರೆ, ಕೆಂಪೇಗೌಡ ಬಡಾವಣೆ ನಿರ್ಮಾಣ ವಿಚಾರದಲ್ಲಿ ಅನ್ಯಾಯವಾಗಿರುವುದರ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಶ್ರೀ ಆರ್. ಅಶೋಕ್:– ಮಾನ್ಯ ಸಭಾಧ್ಯಕ್ಷರೆ, ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ರೇವಣ್ಣನವರೆ, ನಿಮ್ಮ ಪ್ರಶ್ನೆಯನ್ನು ಸಂಪೂರ್ಣವಾಗಿ ಕೇಳಿ. ಆಡಳಿತ ಪಕ್ಷದವರು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, Sir, House is not in order. House is not in order.

(ಗೊಂದಲ)

ಶ್ರೀ ಆರ್. ಅಶೋಕ್:– ಮಾನ್ಯ ಸಭಾಧ್ಯಕ್ಷರೆ, ರೈತರೆಲ್ಲ ಹೋರಾಟ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ಸನ್ಮಾನ್ಯ ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಸದನದ ಬಾವಿಯಲ್ಲಿ ನಿಂತು ಘೋಷಣೆ ಕೂಗುತ್ತಿರುವವರೆಲ್ಲಾ ಹೋಗಿ ಕುಳಿತುಕೊಳ್ಳಲಿ. ಇವರು ಪ್ರಶ್ನೆ ಕೇಳಲಿ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿ. ಉತ್ತರ ಕೊಡುವುದಕ್ಕೆ ನಾವು ತಯಾರಿದ್ದೇವೆ. ವಿರೋಧ ಪಕ್ಷದವರಿಗೆ ಚರ್ಚೆ ಮಾಡಲು ಇಷ್ಟವಿಲ್ಲ. ಇವರು ರೈತರ ಪರವಾಗಿ ಇಲ್ಲ, ದಲಿತರ ಪರವಾಗಿ ಇಲ್ಲ. ಯಾವತ್ತಿಗೂ ಇವರು ರೈತರು, ದಲಿತರ ಪರವಾಗಿ ಇರುವುದಕ್ಕೆ ಸಾಧ್ಯವೇ ಇಲ್ಲ.

ಅಧ್ಯಕ್ಷರು:– ರೇವಣ್ಣನವರೆ ನೀವು ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾನು ಚರ್ಚೆ ಮಾಡುತ್ತೇನೆ. ಪ್ರಶ್ನೋತ್ತರವನ್ನು ನಂತರ ಇಟ್ಟುಕೊಳ್ಳಿ.

ಶ್ರೀ ಆರ್. ಅಶೋಕ್:– ಹೊರಗಡೆ ರೈತರುಗಳಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ. ಪೊಲೀಸ್‌ನವರನ್ನು ಬಿಟ್ಟು ರೈತರನ್ನು ತಡೆ ಹಿಡಿದಿದ್ದಾರೆ. ರೈತರ ವಿಚಾರವಾಗಿ ಚರ್ಚೆ ಮಾಡಲು ಅವಕಾಶ ಕೊಡಿ. ಕಳೆದ ಸದನದಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ. ಸದನದ ಒಳಗಡೆ ರೈತರ ಪರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ. ಹೊರಗಡೆ ರೈತರನ್ನು ಪೊಲೀಸರಿಂದ ತಡೆ ಹಿಡಿಸುತ್ತಿದ್ದೀರಿ. ಇದು ಪ್ರಜಾಪ್ರಭುತ್ವ ದೇಶ, ಪ್ರಜಾಪ್ರಭುತ್ವದಲ್ಲಿ ಮಾತನಾಡುವುದಕ್ಕೆ ಅವಕಾಶವಿದೆ.

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, House is not in order. ಮಾನ್ಯ ಅಧ್ಯಕ್ಷರೆ, ನಾನು ಚರ್ಚೆ ಮಾಡುತ್ತೇನೆ. ಆಮೇಲೆ ಪ್ರಶ್ನೋತ್ತರ ತೆಗೆದುಕೊಳ್ಳಿ. ಈರುಳ್ಳಿ ಬೆಳೆದಂಥವರು, ಕಬ್ಬು, ಭತ್ತ ಬೇಳೆದಂಥವರೆಲ್ಲರೂ ಈ ಸರ್ಕಾರ ಬಂದ ಮೇಲೆ ಬೀದಿಗೆ ಬಿದ್ದಿದ್ದಾರೆ. ರೈತರ ಸಮಸ್ಯೆಗಳ ಕುರಿತು ಚರ್ಚೆ ಮಾಡುವುದಕ್ಕೆ ಈ ಸರ್ಕಾರಕ್ಕೆ ಮನಸ್ಸಿಲ್ಲ. ಉತ್ತರ ಕರ್ನಾಟಕದ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕು.

(ಗೊಂದಲ)

ಶ್ರೀ ಆರ್. ಅಶೋಕ್:– ಸದನದಲ್ಲಿ 7 ಜನ ಮಂತ್ರಿಗಳು ಮಾತ್ರ ಇದ್ದಾರೆ. ಮಂತ್ರಿಗಳಿಗೂ ಜವಾಬ್ದಾರಿ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಇವರಿಗೆ ಜವಾಬ್ದಾರಿ ಇಲ್ಲ. ಸದನದಲ್ಲಿ ಮಂತ್ರಿಗಳು ಬಂದಿಲ್ಲ. ಕೇವಲ 7 ಜನ ಮಾತ್ರ ಇದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ:– ಮಂತ್ರಿಗಳು ಮೇಲ್ಮನೆಗೆ ಹೋಗಿರಬಹುದು. ನಾವು ಚರ್ಚೆಗೆ ತಯಾರಾಗಿದ್ದೇವೆ. ಪಾಂಡವರು 5 ಜನರಿದ್ದರೂ ಸಾಕಲ್ಲವೆ? ನಾವು ಚರ್ಚೆಗೆ ರೆಡಿ ಇದ್ದೇವೆ. ಚರ್ಚೆ ಮಾಡುವುದಕ್ಕೆ ಯಾವುದೇ ರೀತಿಯ ತಡೆ ಇಲ್ಲ. ಇವರಿಗೆ ಚರ್ಚೆ ಮಾಡುವುದಕ್ಕೆ ಮನಸ್ಸಿಲ್ಲ. ಚರ್ಚೆ ಮಾಡಿ ನಾವು ಉತ್ತರಿಸುತ್ತೇವೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ನಾವು ಚರ್ಚೆಗೆ ತಯಾರಿದ್ದೇವೆ. ಇವರಿಗೆ ಚರ್ಚೆ ಮಾಡುವ ಮನಸ್ಸಿಲ್ಲ. ನೀವು ಚರ್ಚೆ ಮಾಡಿ. ಸುಮ್ಮನೆ ಗಲಾಟೆ ಮಾಡಬೇಡಿ. ಚರ್ಚೆ ಮಾಡಲು ನಮ್ಮಿಂದ ಯಾವುದೇ ರೀತಿಯ ತಡೆಯಿಲ್ಲ.

(ಗೊಂದಲ)

ಶ್ರೀ ಆರ್. ಅಶೋಕ್:– ಸದನದಲ್ಲಿ ಯಾರೂ ಸಚಿವರುಗಳು ಇಲ್ಲ.

(ಗೊಂದಲ)

ಅಧ್ಯಕ್ಷರು:– ಮುಂದಿನ ಪ್ರಶ್ನೆ ಶ್ರೀ ಸುರೇಶ್ ಬಾಬು ರವರದು ಕೇಳಿ.

(ಗೊಂದಲ)

ಶ್ರೀ ಆರ್. ಅಶೋಕ್:– ತಾವು ತಾರತಮ್ಯ ಮಾಡಬಾರದು. ದಯವಿಟ್ಟು ವಿರೋಧ ಪಕ್ಷದವರಿಗೆ ಮಾತನಾಡಲು ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, House is not in order.

(ಗೊಂದಲ)

ಶ್ರೀ ಆರ್. ಅಶೋಕ್:– ಬಡ ರೈತರ ಪರವಾಗಿ, ನಮ್ಮ ಪರವಾಗಿ ದಯವಿಟ್ಟು ವಿರೋಧ ಪಕ್ಷದವರಿಗೆ ಆದ್ಯತೆ ಕೊಡಬೇಕು.

(ಗೊಂದಲ)

ಅಧ್ಯಕ್ಷರು:– ಈಗ ಸುಧಾಕರ್ ಲಾಲ್, ನಿಮ್ಮ ಪ್ರಶ್ನೆಗೆ ಉತ್ತರಿಸಲು ಸಚಿವರು ಇಲ್ಲ. ಈಗ ಮಂಜುನಾಥ ಗೌಡರ ಪ್ರಶ್ನೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, House is not in order.

(ಗೊಂದಲ)

(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಸದಸ್ಯರು ಅವರವರ ಸ್ಥಾನದಲ್ಲಿಯೇ ಎದ್ದು ನಿಂತು ಬಿಜೆಪಿಯವರ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು.)

ಅಧ್ಯಕ್ಷರು:– ನೀವು ಕುಳಿತುಕೊಳ್ಳಿ. ಈಗ ಪಿ. ರಾಜೀವ್ ರವರ ಪ್ರಶ್ನೆ.

ಪೊಲೀಸ್ ಪೇದೆ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಬಯಲು

07(119); ಶ್ರೀ ರಾಜೀವ್ ಪಿ (ಕುಡಚಿ)

ಅ) ಪೊಲೀಸ್ ಪೇದೆ ನೇಮಕಾತಿ ಪರೀಕ್ಷೆಯಲ್ಲಿ ದಿನಾಂಕ 16.11.2014ರಂದು ಪಾಲ್ಗೊಂಡ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

ಆ) ಖಾಲಿ ಇರುವ ಎಷ್ಟು ಹುದ್ದೆಗಳಿಗಾಗಿ ಈ ಪರೀಕ್ಷೆಯನ್ನು ನಡೆಸಲಾಯಿತು?

ಇ) ಈ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಬಯಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ?

ಉ) ಪ್ರಶ್ನೆ ಪತ್ರಿಕೆ ಬಯಲು ಮಾಡಿದ ವ್ಯಕ್ತಿಗಳನ್ನು ಸರ್ಕಾರ ಗುರುತಿಸಿದೆಯೇ; ಹಾಗಿದ್ದಲ್ಲಿ, ಯಾವ ಕ್ರಮವನ್ನು ಜರುಗಿಸಲಾಗಿದೆ?

ಊ) ಪ್ರಶ್ನೆ ಪತ್ರಿಕೆ ಬಯಲಾಗುವುದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾನಸಿಕ ಸ್ಥೈರ್ಯ ಕುಂದುವುದಿಲ್ಲವೆ;

ಋ) ಪರೀಕ್ಷೆಯನ್ನು ಪುನಃ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?